**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**
**ಬೆಂಗಳೂರು ಗ್ರಾಮಾಂತರ ಜಿಲ್ಲೆ**

**ಎಸ್.ಸಿ. ನಂಃ 10023/2018**

**ಚಾಸಾ ಃ 21**

**ಪ್ರಾಸಾ ಃ 11**

| | | |
|---|---|---|
| **ಹೆಸರು** | **ಃ** | **ಕಲ್ಲಪ್ಪ ಎಸ್. ಕಾರತ್** |
| **ತಂದೆಯ ಹೆಸರು** | **ಃ** | **ಶಂಕರಪ್ಪ** |
| **ವಯಸ್ಸು** | **ಃ** | **57 ವರ್ಷ** |
| **ವೃತ್ತಿ** | **ಃ** | **ಪೋಲೀಸ್ ಇನ್ಸ್‌ಪೇಕ್ಟರ್, ತಿರುಮಲಶೆಟ್ಟಿಹಳ್ಳಿ ಪೋಲೀಸ ಠಾಣೆ.** |
| **ವಾಸ** | **ಃ** | **ತಿರುಮಲಶೆಟ್ಟಿಹಳ್ಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ.** |

**ಈ ದಿನ ದಿನಾಂಕಃ 02.01.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ ಃ**

1. ದಿನಾಂಕಃ 07.05.2015 ರಿಂದ 12.06.2017 ರವರೆಗೆ ನಾನು ಬೆಂಗಳೂರು ನಗರ ಬಸವೇಶ್ವರ ಪೋಲೀಸ ಠಾಣೆಯಲ್ಲಿ ಪೋಲೀಸ ಇನ್ಸ್‌ಪೇಕ್ಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ 23.10.2016 ರಂದು ಬಸವೇಶ್ವರ ಪೋಲೀಸ ಠಾಣೆ ಮೊಕದ್ದಮೆ ಸಂಖ್ಯೆ 328/2016 ರ ಪ್ರಕರಣದಲ್ಲಿ ಆರೋಪಿಗಳನ್ನು ಮತ್ತು ಮಾಲು ಪತ್ತೆಗಾಗಿ ನಮ್ಮ ಠಾಣೆಯ ಸಿಬ್ಬಂಧಿಗಳಾದ ಚಾಸಾ-20 ಪಿಎಸ್‌ಐ ಗೋವಿಂದರಾಜು, ಚಾಸಾ-19 ಎಎಸ್‌ಐ ವೈ ವಿ. ಸಿದ್ದಲಿಂಗಯ್ಯ, ಚಾಸಾ-18 ಹೆಚ್‌ಸಿ-6090 ಆರ್.ಎ ಚಂದ್ರ, ಚಾಸಾ-17 ಹೆಚ್‌ಸಿ-6059 ಮಾನಪ್ಪ ಮತ್ತು ಚಾಸಾ-

16 ಪಿಸಿ-9562 ಸಿದ್ದಪ್ಪರಾವ್, ಚಾಸಾ-15 ಪಿಸಿ-9345 ನರಸಿಂಹಮೂರ್ತಿ ಮತ್ತು ಚಾಸಾ-14 ಪಿಸಿ-10998 ಗೋಪಾಲ ಇವರನ್ನು ನೇಮಿಸಿದ್ದೇನು.

3. ಅದೇ ದಿವಸ ರಾತ್ರಿ 09.00 ಗಂಟೆಗೆ ಮೇಲೆ ಹೇಳಿದ ಸಿಬ್ಬಂಧಿಗಳು ಆರೋಪಿತರಾದ ಯಲ್ಲಪ್ಪ, ರಾಜೇಶ್ ಅಲಿಯಾಸ ರಾಜಿ, ಹರ್ಷ ಅಲಿಯಾಸ ಮುನ್ನಿ, ನರಸಿಂಹ ಆರ್. ಅಲಿಯಾಸ ಪರೋಟ ಮತ್ತು ಸುಮಂತ್ ಅಲಿಯಾಸ ಸುಳ್ಯ ಅವರನ್ನು ಮತ್ತು ಅವರು ಕೃತ್ಯಕ್ಕೆ ಉಪಯೋಗಿಸಿದ್ದ 2 ದ್ವಿಚಕ್ರ ವಾಹನಗಳನ್ನು ತಂದು ನನ್ನ ಮುಂದೆ ಹಾಜರುಪಡಿಸಿ ವರದಿಯನ್ನು ನೀಡಿರುತ್ತಾರೆ. ಸದರಿ ವರದಿಯ ನಕಲನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-12 ಎಂದು ಗುರುತಿಸಲಾಯಿತು.

4. ಅಂದು ನನ್ನ ಮುಂದೆ ಹಾಜರುಪಡಿಸಿದ ಆರೋಪಿತರ ಪೈಕಿ ಇಂದು ನ್ಯಾಯಾಲಯದಲ್ಲಿ ಇಬ್ಬರು ಆರೋಪಿತರನ್ನು ನೋಡಿ ಗುರುತಿಸಿರುತ್ತೇನೆ. ಸದರಿ ಆರೋಪಿತರ ಹೆಸರು ಸುಮಂತ್ ಮತ್ತು ನರಸಿಂಹ ಎಂದು ಸಾಕ್ಷಿದಾರರು ಹೇಳಿರುತ್ತಾರೆ. ಸದರಿ ವ್ಯಕ್ತಿಯನ್ನು ನ್ಯಾಯಾಲಯವು ವಿಚಾರಿಸಿದಾಗ ಸುಮಂತ ತಂದೆಯ ಹೆಸರು ತಿಮ್ಮಯ್ಯ ಎಂದು ಹೇಳಿರುತ್ತಾನೆ. ಅದೇ ರೀತಿ ಇನೊಬ್ಬ ವ್ಯಕ್ತಿಯನ್ನು ನ್ಯಾಯಾಲಯವು ವಿಚಾರಿಸಿದಾಗ ತನ್ನ ಹೆಸರು ನರಸಿಂಹ ತಂದೆಯ ಹೆಸರು ಎಲ್ ರಾಜು ಎಂದು ಹೇಳಿರುತ್ತಾನೆ. ಸದರಿ ವ್ಯಕ್ತಿಗಳು ಕ್ರಮವಾಗಿ 4 ಮತ್ತು 5 ನೇ ಆರೋಪಿತರಾಗಿರುತ್ತಾರೆ.

5. ಉಳಿದ ಆರೋಪಿತರಾದ ಯಲ್ಲಪ್ಪ, ರಾಜೇಶ ಮತ್ತು ಹರ್ಷನನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಆರೋಪಿತರು ನಿರಂತರ ಗೈರು ಹಾಜರಾಗಿದ್ದರಿಂದ ಅವರ ವಿರುದ್ಧ ಪ್ರರಕಣವನ್ನು ಪ್ರತ್ಯೇಕಿಸಿ ಕ್ರಮವಾಗಿ 1 ನೇ ಆರೋಪಿಯ ವಿರುದ್ಧ ಎಸ್.ಸಿ. ಸಂಖ್ಯೆ 10028/2023 ಎಂದು ಮತ್ತು 2 ಮತ್ತು 3 ನೇ ಆರೋಪಿತರ ವಿರುದ್ಧ ಎಸ್.ಸಿ. ಸಂಖ್ಯೆ 10020/2023 ಎಂದು ಪ್ರತ್ಯೇಕವಾಗಿ ನೊಂದಣಿಪಡಿಸಲಾಗಿರುತ್ತದೆ.

6. ಅದೇ ದಿವಸ ಆರೋಪಿಗಳಾದ ಯಲ್ಲಪ್ಪ, ರಾಜೇಶ, ಹರ್ಷ ಮತ್ತು ಸುಮಂತ್ ಇವರ ಸ್ವ ಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. 1 ನೇ ಆರೋಪಿ ಯಲ್ಲಪ್ಪನು ತನ್ನ ಸ್ವ ಇಚ್ಛಾ ಹೇಳಿಕೆಯಲ್ಲಿ ದೊಡ್ಡಬಳ್ಳಾಪುರ ಮತ್ತು ಅದರ ಸುತ್ತಮುತ್ತ ಅಪರಾಧ ಕೃತ್ಯಗಳನ್ನು ಮಾಡಿರುತ್ತೇವೆಂದು ಮತ್ತು ತನ್ನ ಹೇಳಿಕೆಯಲ್ಲಿ ದೊಡ್ಡಬಳ್ಳಾಪುರದ ಶ್ರೀನಗರದಲ್ಲಿರುವ ಎಂ.ಎ. ರಘು ಅವರ ಮನೆಗೆ ನಾನು(ಯಲ್ಲಪ್ಪ), ಹರ್ಷ, ರಾಜೇಶ ಮತ್ತು ಸುಮಂತ್ ಎಲ್ಲರೂ ಸೇರಿಕೊಂಡು ಹೋಗಿ ಕೈಕಾಲುಗಳಿಗೆ ಹೊಡೆದೆವು ಎಂದು ಮತ್ತು ಎಂ.ಎ. ರಘು ಅವರನ್ನು ಸಾಯಿಸಬೇಕೆಂದು ಅವರಿಗೆ ನಾನು ಚಾಕುನಿಂದ ಚುಚ್ಚಿರುತ್ತೇನೆಂದು ಮತ್ತು ಅವರನ್ನು ಬಿಡಿಸಲು ಬಂದ ಅವರ ತಾಯಿಗೆ ಕೈಗಳಿಂದ ಹೊಡೆದು ಅಲ್ಲಿಂದ ಪರಾರಿಯಾಗಿರುತ್ತೇನೆಂದು ಹೇಳಿಕೆ ನೀಡಿರುತ್ತಾನೆ.

7. ಅಲ್ಲದೇ ತನ್ನ ಹೇಳಿಕೆಯಲ್ಲಿ ಡ್ರ್ಯಾಗರ್ ಚಾಕುವನ್ನು ಇಟ್ಟಿದ್ದ ಸ್ಥಳವನ್ನು ತೋರಿಸುತ್ತೇವೆಂದು ಹಾಗೂ ಕೃತ್ಯ ನಡೆದ ಸ್ಥಳಗಳನ್ನು ತೋರಿಸುತ್ತೇವೆಂದು ಹೇಳಿಕೆ ನೀಡಿರುತ್ತಾನೆ.

ಸದರಿ ಹೇಳಿಕೆಯ ಅಂಶಗಳನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-13 ಎಂದು ಗುರುತಿಸಲಾಯಿತು. ಅದೇ ರೀತಿ ಉಳಿದ ಆರೋಪಿಗಳಾದ ರಾಜೇಶ, ಹರ್ಷ ಮತ್ತು ಸುಮಂತ ಸಹ ಅದನ್ನೇ ನುಡಿದಿರುತ್ತಾರೆ. ಸದರಿಯವರ ಹೇಳಿಕೆಯ ಮೇರೆಗೆ ಕೃತ್ಯವು ದೊಡ್ಡಬಳ್ಳಾಪುರದ ನಗರ ಪೋಲೀಸ ಠಾಣೆಯ ವ್ಯಾಪ್ತಿಯಲ್ಲಿ ನಡೆದ ಆಧಾರದಲ್ಲಿ ಸದರಿ ವಿಚಾರವನ್ನು ಠಾಣಾ ಧಿಕಾರಿಗಳಿಗೆ ತಿಳಿಸಿದ್ದು ಸದರಿಯವರು ಆ ಬಗ್ಗೆ ಠಾಣೆಯಲ್ಲಿ ಶಶಿಕುಮಾರ್ ಎಂಬುವವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಾಗಿರುತ್ತದೆಂಬ ವಿಚಾರವನ್ನು ತಿಳಿಸಿರುತ್ತಾರೆ.

8. ನಂತರ ನ್ಯಾಯಾಲಯದ ಆದೇಶದ ಮೇರೆಗೆ ಸಂಬಂಧಪಟ್ಟ ದಾಖಲೆಗಳ ದೃಢೀಕೃತ ನಕಲಿನೊಂದಿಗೆ ದೊಡ್ಡಬಳ್ಳಾಪುರ ನಗರ ಪೋಲೀಸ ಠಾಣೆಗೆ ದಾಖಲೆಗಳನ್ನು ಕಳುಹಿಸಿಕೊಟ್ಟಿರುತ್ತೇನೆ. ನಮ್ಮ ಠಾಣೆಗೆ ನೀಡಿದ ದೂರು ಮತ್ತು ದಾಖಲಾಗಿದ್ದ ಅಪರಾಧ ಸಂಖ್ಯೆ 328/2016 ರ ಪ್ರಥಮ ವರ್ತಮಾನ ವರದಿಯ ನಕಲನ್ನು ಈಗ ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ-14 ಮತ್ತು ನಿಪಿ-15 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ :**

ಆರೋಪಿ ಪರ ವಕೀಲರನ್ನು ಕರೆಸಲಾಯಿತು, ಗೈರು ಹಾಜರಿರುತ್ತಾರೆ, ಯಾರೂ ಪ್ರತಿನಿಧಿಸಿರುವು ದಿಲ್ಲ, ಆರೋಪಿತರನ್ನು ವಿಚಾರಿಸಿದಾಗ ಬರುತ್ತಾರೆಂದು ತಿಳಿಸಿರುತ್ತಾರೆ, ಆದರೆ ಬಂದಿರುವುದಿಲ್ಲ, ಆದ್ದರಿಂದ ಪಾಟೀ ಸವಾಲು ಇರುವುದಿಲ್ಲ ಎಂದು ಪರಿಗಣಿಸಲಾಯಿತು.

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ